

# ತೊಂದರೆ ಕೊಡದಿರೆ ಚಂದ

ಕಾಡಿನ ಸದ್ದು
ಕಾಡಿನ ಪರಿಮಳ
ಕಾಡಿನ ಕತ್ತಲೆ ಚಂದ
ಅಳಿಲಿನ ಹೆಜ್ಜೆ
ಮೂಡಿದ ಮಣ್ಣು
ನವಿಲಿನ ಕಣ್ಣು ಚಂದ

ಇರುವೆಯ ಬಿಲದಲಿ
ಹುಲ್ಲಿನ ಬೀಜ
ಕಾಗೆಯ ಗರಿಗಳು ಚಂದ
ಆನೆಯ ಮರಿಗೆ
ಪುಟ್ಟಾಣಿ ಸೊಂಡಿಲು
ಸಿಂಹದ ನಡಿಗೆ ಚಂದ

ಗೂಬೆಯ ಕೂಗಿಗೆ
ಎದೆಯಲಿ ಪುಳಕ
ಮಿಂಚಿನ ಹುಳವು ಚಂದ
ಕೊರೆಯುವ ಚಳಿಗೆ
ಏಳುವ ಮಂಜು
ಬೆಳ್ಳನೆ ಬೆಳಗು ಚಂದ

ಹಾವಿನ ಮೊಟ್ಟೆ
ಹುಳುವಿನ ಮೊಟ್ಟೆ
ಹಕ್ಕಿಯ ಮೊಟ್ಟೆ ಚಂದ
ನಾವು ನೀವು
ಕಾಡಿಗೆ ಹೋಗಿ
ತೊಂದರೆ ಕೊಡದಿರೆ ಚಂದ
ಊರಲ್ಲುಳಿದರೆ ಚಂದ!